PaperVideo

# ಇದು ಫ್ರೀ ಡಿಜಿಟಲ್ ಕ್ಲಾಸ್‌ರೂಮ್

ಬಹುತೇಕ ವಿದ್ಯಾರ್ಥಿಗಳಿಗೆ ಕಬ್ಬಿಣದ ಕಡಲೆಯಾಗಿರುವ ಗಣಿತ ವಿಷಯವನ್ನು ಇನ್ನಷ್ಟು ಸಲುಭವಾಗಿಸಲು ಪೇಪರ್ ವಿಡಿಯೊ ಸಂಸ್ಥೆಯು ಅತ್ಯಾಧುನಿಕ ತಂತ್ರಜ್ಞಾನದೊಂದಿಗೆ ಮುಂದೆ ಬಂದಿದ್ದು, ಡಿಜಿಟಲ್ ಕ್ಲಾಸ್ ರೂಮ್ ಅನ್ನು ಪರಿಚಯಿಸಿದೆ.

ಕೆಲ ವಿದ್ಯಾರ್ಥಿಗಳಿಗೆ ಗಣಿತ ವಿಷಯ ತುಂಬಾ ಕ್ಲಿಷ್ಟಕರ. ‘ಅದೊಂದು ವಿಷಯದಲ್ಲಿ ಮಕ್ಕಳು ಹಿಂದುಳಿದಿದ್ದಾರೆ’ ಎಂಬ ಕಾರಣಕ್ಕೆ ಪೋಷಕರು ಅವರ ಮೇಲೆ ವಿಪರೀತ ಒತ್ತಡ ಹೇರಿ ಟ್ಯೂಷನ್‌ಗೂ ಹಾಕುವುದುಂಟು. ಇದರಿಂದ ಮಕ್ಕಳ ಮೇಲೆ ಅನಗತ್ಯವಾಗಿ ಹೊರೆ ಹೇರಿದಂತಾಗುತ್ತದೆ. ಈ ಹೊರೆಯನ್ನು ಇಳಿಸುವ ಸಲುವಾಗಿಯೇ ಪೇಪರ್ ವಿಡಿಯೊ ಸಂಸ್ಥೆಯು ಈ ‘ಡಿಜಿಟಲ್ ಕ್ಲಾಸ್ ರೂಮ್’ ಅನ್ನು ಪರಿಚಯಿಸಿದೆ.

‘ಡಿಜಿಟಲ್ ಕ್ಲಾಸ್ ರೂಮ್’ನಿಂದಾಗಿ ಮಕ್ಕಳು ಬೆರಳ ತುದಿಯಲ್ಲಿ ಗಣಿತ ಸಮಸ್ಯೆಗಳಿಗೆ ಪರಿಹಾರ ಕಂಡುಕೊಳ್ಳಬಹುದು. ಇದರಿಂದ ಗ್ರಾಮೀಣ ಪ್ರದೇಶ ಹಾಗೂ ನಗರ ಪ್ರದೇಶಗಳ ವಿದ್ಯಾರ್ಥಿಗಳಿಗೆ ಅನುಕೂಲವಾಗಲಿದೆ. ಸಂಸ್ಥೆಯು ರಚಿಸಿರುವ ಡಿಜಿಟಲ್ ಪಠ್ಯಕ್ರಮವು ಕರ್ನಾಟಕ ಶಿಕ್ಷಣ ಮಂಡಳಿ ಸೇರಿದಂತೆ ಸಿಬಿಎಸ್ಸಿ, ಐಸಿಎಸ್ಸಿಗೆ ಕೂಡ ಪೂರಕವಾಗುತ್ತದೆ. 8 ರಿಂದ 12 ನೇ ತರಗತಿ ವಿದ್ಯಾರ್ಥಿಗಳಿಗೂ ಅನುಕೂಲವಾಗುವಂತೆ ಇದನ್ನು ರಚಿಸಲಾಗಿದೆ.




ಪೇಪರ್‌ವಿಡಿಯೋ ಸಂಸ್ಥೆಯ ಶಿಕ್ಷಕರು ನಡೆಸುವ ‘ಲೈವ್ ಕ್ಲಾಸ್’ ಮತ್ತು ಡಿಜಿಟಲ್ ಬುಕ್ಸ್ ಸಂಪೂರ್ಣ ಉಚಿತವಾಗಿದ್ದು, ಭಾರತದಾದ್ಯಂತ ಉದ್ಯಾರ್ಥಿಗಳಿಗೆ ಗುಣಮಟ್ಟದ ಭೋದನೆಯನ್ನು ಸಂಸ್ಥೆಯು ಒದಗಿಸುತ್ತದೆ. ಇದನ್ನು ವಿದ್ಯಾರ್ಥಿಗಳನ್ನು ಗಣಿತ ವಿಷಯದತ್ತ ಆಕರ್ಷಿಸಲು ಮತ್ತು ತೀರಾ ಸರಳೀಕರಣದ ರೂಪದಲ್ಲಿ ಅರ್ಥವಾಗುವಂತೆ ಶೈಕ್ಷಣಿಕ ಪುಸ್ತಕಗಳನ್ನು ಕಲಾತ್ಮಕವಾಗಿ ರೂಪಿಸಲಾಗುತ್ತದೆ.

ಡಿಜಿಟಲ್ ಬುಕ್ಸ್ ಸಹಾಯದಿಂದ ಪಠ್ಯದ ರೂಪವನ್ನು ಇದರಲ್ಲಿ ದೃಶ್ಯಕ್ಕಿಳಿಸಬಹುದು. ಅದರಿಂದಾಗಿ ಮಕ್ಕಳ ಕಲಿಕೆಯ ವಿಧಾನವು ಸರಳವಾಗುತ್ತದೆ ಮತ್ತು ಕಠಿಣ ವಿಷಯಗಳನ್ನು ಸಹ ಬಹುಕಾಲ ನೆನೆಪಿನಲ್ಲಿ ಇಟ್ಟುಕೊಳ್ಳಲು ನೆರವಾಗುತ್ತದೆ. ಡಿಜಿಟಲ್ ಬುಕ್ಸ್, ವಿಡಿಯೊ ಪಾಠ, 10,000 ಕ್ಕೂ ಹೆಚ್ಚು ಹೋಂವರ್ಕ್ ಮತ್ತು ಪರೀಕ್ಷೆ ಪ್ರಶ್ನೆಗಳು, 3000 ಕ್ಕೂ ಹೆಚ್ಚು ಫ್ಲಾಶ್ ಕಾರ್ಡ್ಸ್ ಮತ್ತು ಟುಡುಲಿಸ್ಟ್ ಗಳನ್ನು ಪೇಪರ್‌ವಿಡಿಯೋ ಒಳಗೊಂಡಿದೆ. ಪೇಪರ್ ವಿಡಿಯೊ ಆ್ಯಪ್ ಸಹ ಗೂಗಲ್ ಪ್ಲೇಸ್ಟೋರ್‌ನಲ್ಲೂ ಲಭ್ಯವಿದೆ.

■ ಶಶಿಕುಮಾರ್ ಸಿ.

